ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 7

Total No. of Questions : 26 ] [ Total No. of Printed Pages : 7

**ಸಂಕೇತ ಸಂಖ್ಯೆ : 444-K (RS)**

**Code No. : 444-K (RS)**

# ಡಿ.ಎಲ್.ಎಡ್. ದ್ವಿತೀಯ ವರ್ಷ

# D.El.Ed. SECOND YEAR

# ಕಲಿಕೆಯನ್ನು ಅನುಕೂಲಿಸುವುದು (ಹಿ.ಪ್ರಾ.ಶಾ.)
# ಪ್ರಥಮ ಭಾಷೆ – ಕನ್ನಡ

# FACILITATING LEARNING ( HPS )
# FIRST LANGUAGE – KANNADA

**(ಪರಿಷ್ಕೃತ ಪಠ್ಯವಸ್ತು)**

**(Revised Syllabus)**

ದಿನಾಂಕ : 12. 10. 2020 ]

Date : 12. 10. 2020 ]

ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60

Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*

*Register Number of the Candidate*

***ಸೂಚನೆಗಳು :*** i) ಪ್ರತಿ ಉತ್ತರವನ್ನು ಚಿಂತನೆ ಮಾಡಿ, ಸಂಘಟಿಸಿ ಬರೆಯಲು ಅನುಕೂಲವಾಗಬೇಕೆಂದು ಈ ಪತ್ರಿಕೆಗೆ ಉತ್ತರಿಸಲು 3 ಗಂಟೆಗಳ ಕಾಲಾವಕಾಶ ನೀಡಿದೆ.

ii) ಪ್ರತಿ ಪ್ರಶ್ನೆಗೂ ಸೂಚಿಸಿದಷ್ಟು ಉತ್ತರ ಮಾತ್ರ ಬರೆಯಿರಿ.

## ಭಾಗ – I

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ :** $10 \times 1 = 10$

1. ಮಗು ಸಾಮಾನ್ಯವಾಗಿ ತನ್ನ ಮಾತಿನ ಮೂಲಕ ಅನಿಸಿಕೆಗಳನ್ನು ವ್ಯಕ್ತಪಡಿಸುವ ಸಾಮಾರ್ಥ್ಯವನ್ನು ಪಡೆಯುವುದು

(A) ಶಾಲೆಗೆ ಬರುವ ಮೊದಲು

(B) ಶಾಲೆಗೆ ಬಂದ ಮೇಲೆ

(C) ಶಾಲೆಯ ಶಿಕ್ಷಕರೊಂದಿಗೆ ಇರುವಾಗ

(D) ಶಾಲೆಯಲ್ಲಿ ಸ್ನೇಹಿತರೊಂದಿಗೆ

2. ತರಗತಿಯಲ್ಲಿ ವ್ಯಾಕರಣ ಕಲಿಸುವುದರಿಂದ ಇದು ಸಾಧ್ಯವಾಗುವುದು

(A) ಭಾಷಾ ಶುದ್ಧತೆ (B) ಓದು, ಬರಹ ಶುದ್ಧತೆ

(C) ಅಭಿವ್ಯಕ್ತಿ ಶುದ್ಧತೆ (D) ಇವುಗಳೆಲ್ಲವೂ

3. ಶಾಲೆಯು ಕಲಿಕಾರ್ಥಿಗೆ ಈ ಭಾಷೆಯಲ್ಲಿ ತನ್ನ ವಿಚಾರಗಳನ್ನು, ಅನುಭವಗಳನ್ನು ತಿಳಿಸಲು ಅನುವುಮಾಡಿಕೊಡುತ್ತದೆ

(A) ಪ್ರಾದೇಶಿಕ ಭಾಷೆ (B) ಆಡು ಭಾಷೆ

(C) ಗ್ರಾಂಥಿಕ ಭಾಷೆ (D) ಜನಪದ ಭಾಷೆ

4. 5E ಮಾದರಿಯಲ್ಲಿ ಕಲಿಕಾರ್ಥಿಯನ್ನು ತೊಡಗಿಸಿಕೊಳ್ಳುವ ಹಂತವು ಒಳಗೊಂಡಿರುವ ಉಪಘಟಕಾಂಶಗಳೆಂದರೆ,

I. ಒಪ್ಪಂದ ಸಮಾಲೋಚನೆ

II. ಒಳನೋಟಗಳನ್ನು ಅನ್ವಯಿಸುವುದು

III. ಪ್ರಶ್ನಿಸುವುದು

IV. ಚಿಕ್ಕ ಗುಂಪುಗಳ ರಚನೆ

*ಇವುಗಳಲ್ಲಿ :*

(A) I, III ಮತ್ತು IV ಸರಿ (B) I ಮತ್ತು II ಸರಿ

(C) IV ಮಾತ್ರ ಸರಿ (D) ಇವುಗಳೆಲ್ಲವೂ ಸರಿ

5. ಒಂದು ಭಾಷೆಯನ್ನು ಕಲಿಯುವುದೆಂದರೆ

I. ಕೇವಲ ಶಬ್ದಾರ್ಥಗಳನ್ನು ಉಚ್ಚರಿಸುವುದು

II. ಬೇರೆ ಭಾಷೆಯನ್ನು ತಿರಸ್ಕರಿಸಿ, ಸ್ವ–ಭಾಷೆಯನ್ನು ಪ್ರೀತಿಸುವುದು

III. ಪರಸ್ಪರ ವಿಚಾರಗಳನ್ನು ಹಂಚಿಕೊಳ್ಳುವುದು

IV. ಭಾವನೆಗಳನ್ನು ಮತ್ತು ವಿಚಾರಗಳನ್ನು ಅಭಿವ್ಯಕ್ತಿಸುವುದು

*ಇವುಗಳಲ್ಲಿ :*

(A) I ಮತ್ತು III ಸರಿ (B) II ಮತ್ತು III ಸರಿ

(C) III ಮತ್ತು IV ಸರಿ (D) I ಮತ್ತು IV ಸರಿ

6. ಓದುವ ಕೌಶಲದಲ್ಲಿ ತುಂಬಾ ಸಮರ್ಥರೆನಿಸಿಕೊಳ್ಳುವವರು

(A) ಸಾಂದರ್ಭಿಕವಾಗಿ ಪಠ್ಯದ ಅರ್ಥಗ್ರಹಿಸಬಲ್ಲವರು

(B) ಪ್ರತಿ ಪದವನ್ನು ಬಿಡದೆ ಓದುವವರು

(C) ವೇಗವಾಗಿ ಓದುವವರು

(D) ತೋರಿಕೆಗೆ ಓದುವವರು

7. ನೀವು ಅನುಕೂಲಕಾರರಾಗಿ ಆಲಿಸುವ ಕೌಶಲವನ್ನು ಕಲಿಕಾರ್ಥಿಗಳಲ್ಲಿ ಬೆಳೆಸಲು ಈ ಕೆಳಗಿನ ಯಾವ ಚಟುವಟಿಕೆಯನ್ನು ನಿರ್ವಹಿಸುತ್ತೀರಿ ?

(A) ಗಾದೆಯನ್ನು ವಿಸ್ತರಿಸಿ ಬರೆಯುವುದು (B) ನಿಬಂಧ ಬರೆಸುವುದು

(C) ಪತ್ರ ಬರೆಸುವುದು (D) ಕಥೆ ಹೇಳಿಸುವುದು

8. ಲೇಖನದ ಒಳಾರ್ಥವನ್ನು ತಿಳಿಸುವುದೇ

(A) ಪ್ರಬಂಧ (B) ಸಾರಾಂಶ

(C) ವರದಿ (D) ಭಾವಾರ್ಥ

9. ನಮ್ಮ ಆಲೋಚನೆ ಮತ್ತು ಚಿಂತನೆಗೆ ರೂಪುಕೊಡುವ ಕೌಶಲಗಳು

I. ಬರವಣಿಗೆ

II. ಓದುಗಾರಿಕೆ

III. ಆಲಿಸುವಿಕೆ

IV. ಮಾತನಾಡುವಿಕೆ

*ಇವುಗಳಲ್ಲಿ :*

(A) I ಮತ್ತು IV ಸರಿ (B) I ಮತ್ತು II ಸರಿ

(C) II ಮತ್ತು III ಸರಿ (D) III ಮತ್ತು I ಸರಿ

10. ಮಕ್ಕಳಲ್ಲಿ ವಾಕ್ಯರಚನಾ ಕೌಶಲ್ಯವೃದ್ಧಿಸಲು ಬೇಕಾದ ತಂತ್ರ ಇದು

(A) ತಿಳಿಸುವ ವಾಕ್ಯ (B) ಸವಿಯುವ ವಾಕ್ಯ

(C) ಓದುವ ವಾಕ್ಯ (D) ಬೆಳೆಯುವ ವಾಕ್ಯ

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ :** 5 × 2 = 10

11. ಸಾಹಿತ್ಯದ ಓದಿನಿಂದಾಗುವ ನಾಲ್ಕು ಅನುಕೂಲಗಳನ್ನು ತಿಳಿಸಿ.

12. ನಿರೂಪಣಾ ಸಾಹಿತ್ಯವೆಂದರೇನು ? ಸಂಕ್ಷಿಪ್ತವಾಗಿ ತಿಳಿಸಿ.

13. ನಿಮ್ಮ ತರಗತಿಯಲ್ಲಿ ಕಲಿಕೆಯಲ್ಲಿ ಹಿಂದುಳಿಯುವವರಿಗೆ ಮೌಖಿಕ ಕೌಶಲಗಳನ್ನು ಹೇಗೆ ಅನುಕೂಲಿಸುವಿರಿ ?

14. ಕಲಿಕಾರ್ಥಿಯನ್ನು ಸ್ಪಷ್ಟ ಓದುಗನನ್ನಾಗಿಸಲು ಕೈಗೊಳ್ಳಬೇಕಾದ ನಾಲ್ಕು ಅಂಶಗಳನ್ನು ತಿಳಿಸಿ.

15. ಮಕ್ಕಳಲ್ಲಿ ಸೃಜನಶೀಲತೆಯನ್ನು ಹೆಚ್ಚಿಸಲು ಶಿಕ್ಷಕರಾದ ನೀವು ಅನುಕೂಲಿಸುವ ಯಾವುದಾದರೂ ಎರಡು ಕ್ರಿಯೆಗಳನ್ನು ತಿಳಿಸಿ.

16. ನಿಬಂಧಕ್ಕೂ–ಪ್ರಬಂಧಕ್ಕೂ ಇರುವ ಯಾವುದಾದರೂ ಎರಡು ವ್ಯತ್ಯಾಸಗಳನ್ನು ತಿಳಿಸಿ.

17. ಭಾಷಾ ಶಿಕ್ಷಕರಾದ ನೀವು VII ನೇ ತರಗತಿಯಲ್ಲಿ ಒಂದು ಕಥೆಯನ್ನು ಬೋಧಿಸುವಾಗ ಗಮನಿಸಬೇಕಾದ ಸಾಹಿತ್ಯಿಕ ಅಂಶಗಳಾವುವು ?

18. ಸ್ವತಂತ್ರ ಕಲಿಕೆಯ ನಾಲ್ಕು ಸಾಮರ್ಥ್ಯಗಳನ್ನು ಸಂಕ್ಷಿಪ್ತವಾಗಿ ತಿಳಿಸಿ.

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ (a) ಮತ್ತು (b) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ :** 8 × 5 = 40

19. a) "ಅನುಭವ ಇರುವಲ್ಲಿ ಅಮೃತವಿದೆ." ಈ ನುಡಿಮುತ್ತನ್ನು ಆಧಾರವಾಗಿಟ್ಟುಕೊಂಡು ಯಾವುದಾದರೊಂದು ಕಥೆ ರಚಿಸಿ.

*ಅಥವಾ*

b) ಈ ಕೆಳಗಿನ ಕಥೆಗೆ ಒಂದು ಸೂಕ್ತವಾದ ಶೀರ್ಷಿಕೆಯನ್ನು ನೀಡಿರಿ. ಇಲ್ಲಿ ನೀಡಿರುವ ಸೂಚನೆಗನುಗುಣವಾಗಿ ಐದು ಪ್ರಶ್ನೆಗಳನ್ನು ರಚಿಸಿ.

ಸ್ಮರಿಸುವಿಕೆ ಪ್ರಶ್ನೆಗಳು — 4

ಚಿಂತನೆ ಬಯಸುವ ಪ್ರಶ್ನೆಗಳು — 4

ಸೂಕ್ತವಾದ ಶೀರ್ಷಿಕೆ — 1

ರವಿ ದೂರದ ನವಿಲೂರಿಗೆ ಹೋಗಬೇಕಿತ್ತು. ಆತನಲ್ಲಿ ಹೆಚ್ಚಿಗೆ ಹಣವಿರಲಿಲ್ಲ. ಬಸ್‌ನಿಲ್ದಾಣಕ್ಕೆ ಬಂದು ನವಿಲೂರಿಗೆ ಹೋಗುವ ಬಸ್ಸು ಹತ್ತಿದನು. ಕಿಟಕಿಯ ಹತ್ತಿರ ಕುಳಿತು ಯೋಚಿಸತೊಡಗಿದನು. ಇರುವ ಹಣದಲ್ಲಿ ಹೋಗಬಹುದಾದ ದೂರವನ್ನು ಪ್ರಯಾಣಿಸಿ ಉಳಿದ ದೂರವನ್ನು ನಡೆದುಕೊಂಡು ಹೋಗಲು ನಿರ್ಧರಿಸಿದನು.

ಪಕ್ಕದಲ್ಲಿ ಕುಳಿತಿದ್ದ ಪ್ರಕಾಶನು ಮಾತಿಗೆಳೆದನು. "ಎಲ್ಲಿಗೆ ಹೊರಟಿದ್ದೀರಿ" ? ರವಿ ಹೇಳಿದನು. ನವಿಲೂರಿಗೆಂದು. ಅದಕ್ಕೆ ಆತ ಹೇಳಿದ. 'ಮತ್ಯಾಕೆ ನೀವು ಬಂಡೀಪುರಕ್ಕೆ ಟಿಕೆಟ್ ತೆಗೆದಿರುವಿರಿ' ? ಅದಕ್ಕೆ ರವಿಯು 'ನನ್ನಲ್ಲಿ ಹೆಚ್ಚಿಗೆ ಹಣವಿಲ್ಲ. ಇದ್ದದ್ದೇ ಇಷ್ಟು.' ಆಗ ಪ್ರಕಾಶನು 'ಮುಂದೆ ಹೇಗೆ ಹೋಗುತ್ತೀಯಾ ?' ಎಂದು ಕೇಳಿದನು. ಅದಕ್ಕೆ ರವಿಯು 'ನಡೆದುಕೊಂಡೇ ಹೋಗುತ್ತೇನೆ' ಎಂದನು. ಆಗ ಜೊತೆಗೆ ಪ್ರಯಾಣ ಮಾಡುತ್ತಿದ್ದ ಪ್ರಕಾಶನು 'ಅಯ್ಯೋ! ಈಗಿನ ಕಾಲದಲ್ಲಿ ನಿಮ್ಮಂಥವರೂ ಇದ್ದಾರಲ್ಲ! ಇಲ್ಲಿ ನೋಡಿ, ಸುಮ್ಮನೆ ನಿದ್ದೆ ಬಂದವರಂತೆ ಮಲಗಿಬಿಡಿ. ನವಿಲೂರು ಬಂದಾಗ ಇಳಿದು ಹೋಗಿ ಬಿಡಿ' ಎಂದು ಹೇಳಿದನು. ಆಗ ರವಿಯು, 'ಇಲ್ಲ! ನಾನು ಅಂಥವನಲ್ಲ. ನಡೆದುಕೊಂಡೇ ನನ್ನೂರಿಗೆ ಹೋಗುತ್ತೇನೆ' ಎಂದನು. ರವಿ ಮನದಲ್ಲೇ ಅಂದುಕೊಂಡನು. 'ಇಂಥವರಿಂದಲೇ ಕಾಲ ಕೆಟ್ಟಿದ್ದು.' ರವಿಯ ಮನಸ್ಸು ಅರ್ಥಮಾಡಿಕೊಳ್ಳುವ ಶಕ್ತಿ ಆ ಸಹಪ್ರಯಾಣಿಕ ಪ್ರಕಾಶನಿಗಿರಲಿಲ್ಲ. ಅಂಥವರಿಗೆ ಇನ್ನಾದರೂ ಬುದ್ಧಿಬರಲಿ ಎಂದು ಮನಸಾರೆ ಪ್ರಾರ್ಥಿಸುತ್ತಾ ರವಿ ಬಂಡೀಪುರದಲ್ಲಿ ಬಸ್ಸಿನಿಂದ ಇಳಿದು ನವಿಲೂರ ಕಡೆಗೆ ನಡೆದೇ ಬಿಟ್ಟನು.

20. a) ಭಾಷಾ ಕಲಿಕೆಯನ್ನು ಅನುಕೂಲಿಸುವ ವಿಧಾನಗಳು ಯಾವುವು ? ಯಾವುದಾದರೂ ಎರಡು ವಿಧಾನಗಳನ್ನು ವಿವರಿಸಿ.

***ಅಥವಾ***

b) ಮಗು ಮನೆಭಾಷೆಯಿಂದ ಶಾಲಾಭಾಷೆಗೆ ಬದಲಾಯಿಸಿಕೊಳ್ಳುವಾಗ ಶಾಲೆ ಹೇಗೆ ಅನುಕೂಲಿಸಬೇಕು ? ತಿಳಿಸಿ.

21. a) “ಪಾಠಯೋಜನೆ ಎಂದರೇನು ? ಅದೊಂದು ಯಶಸ್ವಿ ಬೋಧನೆಯ ಕೀಲಿಕೈ ಆಗಿದೆ.” ಈ ಹೇಳಿಕೆಯನ್ನು ಸ್ಪಷ್ಟಪಡಿಸಿ.

***ಅಥವಾ***

b) “ಮಗುವಿನ ಜ್ಞಾನ ಸಂಪಾದನೆಗೆ ಆಡುಭಾಷೆ ಆಪ ಭಾಷೆಯಾಗಿದೆ.” ಈ ಮಾತನ್ನು ಸಮರ್ಥಿಸಿ.

22. a) VII ನೇ ತರಗತಿಯ ಮಕ್ಕಳಲ್ಲಿ ಸೃಜನಶೀಲತೆಯನ್ನು ಬೆಳೆಸುವ ಯಾವುದಾದರೂ ಎರಡು ಚಟುವಟಿಕೆಗಳನ್ನು ವಿವರಿಸಿ.

***ಅಥವಾ***

b) ಕನ್ನಡ ಭಾಷಾ ಶಿಕ್ಷಕರಾಗುವ ನೀವು ನಿಮ್ಮ ಪಾಠಬೋಧನೆಯಲ್ಲಿ ಯಾವ ಕಲಿಕಾ ಸಾಮಗ್ರಿಗಳನ್ನು ಬಳಸುತ್ತೀರಿ ? ಅವುಗಳಲ್ಲಿ ಎರಡನ್ನು ಉದಾಹರಣೆ ಸಹಿತ ವಿವರಿಸಿ.

23. a) ಭಾಷಾ ಕಲಿಕೆ ಮತ್ತು ಗಳಿಕೆ ಎಂದರೇನು ? ಇದರ ನಿಹಿತಾರ್ಥಗಳನ್ನು ವಿವರಿಸಿ.

***ಅಥವಾ***

b) ಸಕ್ರಿಯ ಆಲಿಸುವಿಕೆಯನ್ನು ಪ್ರೋತ್ಸಾಹಿಸುವ ನಿರ್ದಿಷ್ಟ ತಂತ್ರಗಳಾವುವು ? ಇವುಗಳಲ್ಲಿ ಎರಡು ತಂತ್ರಗಳನ್ನು ನಿಮ್ಮ ಬೋಧನೆಯಲ್ಲಿ ಹೇಗೆ ಬಳಸಿಕೊಳ್ಳುವಿರಿ ಎಂಬುದನ್ನು ವಿವರಿಸಿ.

24. a) ನಿಮ್ಮ ತರಗತಿಯಲ್ಲಿ ಮೌಖಿಕ ಅಭಿವ್ಯಕ್ತಿಯನ್ನು ಬೆಳೆಸುವ ಹತ್ತು ಚಟುವಟಿಕೆಗಳನ್ನು ಹೆಸರಿಸಿ, ಅವುಗಳಲ್ಲಿ ಎರಡು ಚಟುವಟಿಕೆಗಳನ್ನು ಉದಾಹರಣೆ ಸಹಿತ ಪ್ರಸ್ತುತಪಡಿಸಿ.

***ಅಥವಾ***

b) ಆಶುಭಾಷಣ ಮತ್ತು ಚರ್ಚಾಸ್ಪರ್ಧೆಯನ್ನು ಮೌಲ್ಯಮಾಪನ ಮಾಡಲು ಒಂದು ತಪಶೀಲು ಪಟ್ಟಿಯನ್ನು ತಯಾರಿಸಿ.

25. a) ಮುಖ್ಯ ವಿಷಯ ಮತ್ತು ವಿವರಗಳು ಕಾಣಿಸಿಕೊಳ್ಳುವುದು ಹಾಗೂ ಲೇಖಕರ ಉದ್ದೇಶ ತಿಳಿಯುವ ಸಾಮರ್ಥ್ಯಗಳಿಸಿಕೊಳ್ಳುವುದರಿಂದ ಸಮರ್ಥ ಓದುಗರಾಗಲು ಸಾಧ್ಯವೇ ? ನಿಮ್ಮ ಉತ್ತರವನ್ನು ಕಾರಣೀಕರಿಸಿ.

***ಅಥವಾ***

b) ಹೆಚ್ಚು ಮಕ್ಕಳಿರುವ ತರಗತಿಯಲ್ಲಿ ಓದನ್ನು ಪ್ರೋತ್ಸಾಹಿಸುವ ಕಾರ್ಯಕ್ರಮವಾಗಿ ತರಗತಿ ಗ್ರಂಥಾಲಯ (ಲೈಬ್ರರಿ) ಮತ್ತು ಓದುಗರ ಕೂಟ (ಕ್ಲಬ್)ನ್ನು ಬಳಸುವುದು ಸೂಕ್ತವೇ ? ನಿಮ್ಮ ಉತ್ತರವನ್ನು ಸ್ಪಷ್ಟಪಡಿಸಿ.

26. a) ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಾದ ನೀವು ಬರವಣಿಗೆ ಕೌಶಲವನ್ನು ಅಭಿವೃದ್ಧಿಪಡಿಸುವ ಚಟುವಟಿಕೆಗಳನ್ನು ಪಟ್ಟಿಮಾಡಿ, ಎರಡನ್ನು ವಿವರಿಸಿ.

***ಅಥವಾ***

b) ವಿದ್ಯಾರ್ಥಿಗಳ ವಾಕ್ಯರಚನಾ ಕೌಶಲ್ಯದ ಬೆಳವಣಿಗೆಯಲ್ಲಿ ಬೆಳೆಯುವ ಕೌಶಲ್ಯಗಳು ಹಾಗೂ ವಾಕ್ಯ ಸೇರಿಸುವ ಚಟುವಟಿಕೆಗಳ ಪಾತ್ರವನ್ನು ಚರ್ಚಿಸಿ.